May 29 - 2004

# ರೈತರ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಪರ್ಕ

(ವಿಶೇಷ ವರದಿ)

ಕೊಪ್ಪಳ ಮೇ 27: ಸರಕಾರ ರೈತರಿಗೆ ಮತ್ತು ಮಹಿಳೆಯರಿಗಾಗಿ ಅನೇಕ ಯೋಜನೆಗಳು ರೂಪಿಸಿದ್ದರೂ ಗ್ರಾಮೀಣ ಮಟ್ಟದವರಿಗೂ ಆ ಯೋಜನೆಗಳು ತಲುಪುತ್ತಿಲ್ಲ, ಆ ಯೋಜನೆಗಳು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಮತ್ತು ರೈತರಿಗೂ ತಲುಪಬೇಕಾದರೆ ಅಂಗನವಾಡಿ ಮುಖಾಂತರ ಇಲ್ಲವೆ ಗ್ರಾ.ಪಂ ಯಾವುದಾದರೂ ಸಂಸ್ಥೆಯ ಮುಖಾಂತರ ತಿಳಿಸುವಂತೆ ಮಾಡಬೇಕು, ಅಂದಾಗ ಮಾತ್ರ ಗ್ರಾಮೀಣ ರೈತರ ಮತ್ತು ಮಹಿಳೆಯರ ಬದುಕು ಹಸನಾಗುತ್ತದೆ. ಇಲ್ಲವಾದರೆ ವ್ಯಸನ ವಾಗುತ್ತದೆ.

ಆದರೆ ಇಲ್ಲಿ ಯಾರು ಯಾವ ಯೋಜನೆಗಳು ನೀಡಿಲ್ಲವೇ? ನೀಡಿದ್ದಾರೆ. ಸಾಕಷ್ಟು ಯೋಜನೆಗಳು ನೀಡಿದ್ದಾರೆ ಆದರೆ ಸರಕಾರದವರಲ್ಲ!. ಗ್ರಾಮೀಣ ರೈತರ,ಮತ್ತು ಮಹಿಳೆಯರ ಬದುಕಿಗೆ ಆಸರೆಯಾಗಿ ಬಂದವರೆ ಸಂಪರ್ಕ ಸಮೂಹದವರು, ಯಾರು ಈ ಸಂಪರ್ಕ ಸಮೂಹದವರು.

ಸಂಪರ್ಕ ಎನ್ನುವ ಸ್ವಯಂ ಸೇವಾ ಸಂಸ್ಥೆ ಕೊಪ್ಪಳದಲ್ಲಿ ಸುಮಾರು 5 ವರ್ಷಗಳಿಂದ ಗ್ರಾಮೀಣ ಜನರ ಜೀವನವನ್ನು ಮತ್ತು ಆರ್ಥಿಕ ಬಲ ಸುಧಾರಿಸಲು ನಿರಂತರವಾಗಿ ಕೆಲಸ ಮಾಡುತ್ತಿರುವ ಒಂದು ಸಮೂಹವೇ ಈ ಸಂಪರ್ಕ. 1998ರಲ್ಲಿ ಪ್ರಾರಂಭಗೊಂಡ ಈ ಸಂಪರ್ಕವು ನಗರದಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಸ್ವಂತ ಉದ್ಯೋಗದಲ್ಲಿ ತೊಡಗಿಸಿ ಅವರಲ್ಲಿ ಉಳಿತಾಯ ಮನೋಭಾವ ಹೆಚ್ಚಿಸುವುದರೊಂದಿಗೆ ಕೆಲಸ ಮಾಡುವ ಈ ಸಂಪರ್ಕವು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿತು. ಪ್ರಾರಂಭದಲ್ಲಿ 40ಸ್ವಸಹಾಯ ಗುಂಪುಗಳಿದ್ದು ಈಗ 150 ಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳಿಗೆ ವಿಸ್ತರಿಸಿ ಕೊಂಡಿದೆ ಎಂದರೆ ಆದರ್ಶ ಮಾದರಿಯ ಸಂಗತಿಯಾಗಿದೆ.





1999ರಲ್ಲಿ ಕೊಪ್ಪಳದ ಪಶ್ಚಿಮ ದಿಕ್ಕಿಗೆ ಇರುವ ಬಿಕನಹಳ್ಳಿಯಲ್ಲಿ ಮಹಿಳೆಯರ ಸ್ವ ಸಹಾಯ ಗುಂಪು ವಿಸ್ತಾರಗೊಂಡಿತು. ಈ ಹಳ್ಳಿಯಲ್ಲಿ ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ ಮಾಡುವ ಸಲುವಾಗಿ ಜನರ ಗುಂಪುಗಳನ್ನು ಸೇರಿಸಿ ಚರ್ಚಿಸಿ ಅವರ ವ್ಯವಸಾಯ ಪದ್ಧತಿ ಸುದಾರಣೆ ಯಾಗುವಂತೆ ಪ್ರೇರೆಪಿಸಿತು.

ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಯನ್ನು ರೈತರು ತಮ್ಮ ಜೀವನದಲ್ಲಿ ಅಳವಡಿಸಿಕೊಳಲು 21 ದಿನ ತರಬೇತಿ ಕಾರ್ಯಕ್ರಮದಲ್ಲಿ ಹಮ್ಮಿಕೊಂಡಿತು. ತರಬೇತಿ ಕಾರ್ಯಕ್ರಮದಲ್ಲಿ ತಾಂತ್ರಿಕ ಸಹಾಯ ನೀಡುವಂತೆ ಸ್ವಯಂ ಸೇವಾ ಸಂಸ್ಥೆಗಳಾದ ಬೈಪ್, ಪ್ರವರ್ಧ ಕಪಾರ್ಟ, ಸ್ವಿಜರ್ ಲ್ಯಾಂಡಿನಲ್ಲಿ ಇರುವ ಬೆರ್ನ್ ವಿಶ್ವ ವಿದ್ಯಾಲಯದ ಸಿ.ಡಿ.ಇ. ಎಂಬ ಸಂಸ್ಥೆಯು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಾಯ ನೀಡಿದವು.

ತರಬೇತಿ : ಸಂಸ್ಥೆಯು ವಿವಿದ ವಿಷಯದ ತಜ್ಞರನ್ನು ಆಹ್ವಾನಿಸಿ ತರಬೇತಿ ಕೊಡಿಸುತ್ತದೆ, ವಾಚ ಬೆಲ್ಟ ತಯಾರಿಸುವುದು, ಆಗರಬತ್ತಿ ತಯಾರಿಕೆ, ಕೂದಲ ಸಂಸ್ಕರಣೆ, ಹೋಲಿಗೆ ತರಬೇತಿ ನೀಡುವುದು. ಸಾಬೂನು ತಯಾರಿಸುವುದು ಕಸೂತಿ ಹಾಕುವುದು, ಮುಂತಾದವುಗಳು ಮಹಿಳೆಯರಿಗೆ ತರಬೇತಿ ನೀಡಿದರೆ, ರೈತರಿಗಾಗಿ, ಮಣ್ಣು ಮತ್ತು ನೀರು ಸಂಸ್ಕರಣೆ, ಗಿಡ ನೆಡುವುದು, ನೈಸರ್ಗಿಕ ಗೊಬ್ಬರ ತಯಾರಿಸುವುದು, ಬತ್ತಿ ಹೋದ ಬೊರ ವೆಲ್ ನೀರು ಮರುಕಳಿಸುವಂತೆ ಕೈತೋಟ, ಮಾಡುವುದು ಕೃಷಿ ಹೊಂಡ ತಯಾರಿಸು ವುದು, ಮುಂತಾದ ತರಬೇತಿ ನೀಡಲಾಗುವುದು ಎಂದು ಸಮನ್ವಯ ಅಧಿಕಾರಿ ಜಯಶೀಲನ್ ಮತ್ತು ರಾಜಶೇಖರ್ ನುಡಿಯುತ್ತಾರೆ. ಸುಮಾರು 3-4ಲಕ್ಷ ರೂಪಾಯಿ ಮೌಲ್ಯದ ಬಿಕನಹಳ್ಳಿ ಗ್ರಾಮದಲ್ಲಿ ಕೃಷಿ ಹೊಂಡ ತಯಾರಿಸುವುದು ,ಗಿಡ ನೆಡುವುದು, ಹೊಲಗಳ ಬದುವಿಗೆ ಒಡ್ಡು ಹಾಕುವ ಕೆಲಸ ಬರದಿಂದ ಸಾಗಿದ್ದು ನೋಡಿದರೆ ಬರದ ನಾಡಿನಲ್ಲಿ ವರವಾಗಿ ಬಂದಂತಾಗಿದೆ.

ಬಿಕನಹಳ್ಳಿ 5 ಸ್ವಸಹಾಯ ಗುಂಪುಗಳ ಮಂಡಳ ಸೇರಿದ ಒಂದು ಒಕ್ಕೂಟವಾಗಿದೆ. ಆ ಒಕ್ಕೂಟಗಳು ಗ್ರಾಮೀಣ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದು, ಬಿಕನಹಳ್ಳಿ ಸಾರಾಯಿ ಮುಕ್ತ ಗ್ರಾಮ ಮಾಡಿದ್ದನ್ನು ನೋಡಿದರೆ, ಮಹಿಳಾ ಸಂಘದವರ ಒಂದು ಸಾಧನೆಯಾಗಿದೆ. ನಾವು ಅವಿದ್ಯಾವಂತರೆ ಇರಬಹುದು. ನಮ್ಮಲ್ಲಿ ಸಾಂಘಿಕ ಶಕ್ತಿ ಇದೆ. ನಾವು ಯಾವ ಹೋರಟಾಕ್ಕೂ ಸಿದ್ದ ನಾವು ಯಾರಿಗಿಂದ ಕಡಿಮೆ ಇಲ್ಲ ಎಂಬ ಮಾತನ್ನು ನುಡಿಯುತ್ತಾರೆ ಇಲ್ಲಿನ ಮಹಿಳಾ ಸಂಘದವರು.

ಸಂಸ್ಥೆಯ ಜಯಶೀಲನ್, ರಾಜಶೇಖರ್, ಜಯಂತಿ, ಉಮಾ, ಈರಮ್ಮ , ನಿರ್ಮಲಾ, ಮೀನಾ, ಅಕ್ಕಮ್ಮ ಮುಂತಾದವರು ತಾಲೂಕಿನ ಹಳ್ಳಿಗಳಲ್ಲಿ ಸಂಚರಿಸಿ ಮಹಿಳೆಯರನ್ನು ಆರ್ಥಿಕ ಸಬಲರನ್ನಾಗಿ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಬಿಕನಳ್ಳಿ ಎಂಬ ಗ್ರಾಮವನ್ನು ಯಾರಾದರೂ ಗುರುತಿಸಿದರ ಅದು ಸಂಪರ್ಕ ಸಂಸ್ಥೆಯ ಸಾಧನೆ ಎಂದರೆ ತಪ್ಪಾಗಲಾರದ. ಹಂತ ಹಂತವಾಗಿ ಬೆಳೆಯುತ್ತಿರುವ ಸಂಪರ್ಕ ಸಂಸ್ಥೆಕ್ಕೆ ಎಲ್ಲರ ಸಹಕಾರ ಸ್ಪಂದನ ಇರಲಿ ಎಂದು ಆಶಿಸೋಣ.

ತಿಪ್ಪನಗೌಡ. ಬಿಕನಹಳ್ಳಿ